C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 256/2019

**ಚಾ.ಸಾ.–09 ಪ್ರಾ.ಸಾ.–10**

| | |
|---|---|
| **ಸಾಕ್ಷಿದಾರರ ಹೆಸರು** | **ಖಾದರ್ ಶರೀಫ್** |
| **ತಂದೆಯ ಹೆಸರು** | **ಅಹಮದ್ ಶರೀಫ್** |
| **ವಯಸ್ಸು** | **55 ವರ್ಷಗಳು** |
| **ಉದ್ಯೋಗ** | **ಪೇಯಿಂಟಿಂಗ್ ಕೆಲಸ** |
| **ವಾಸ** | **ಗಾಂಧಿನಗರ, ಮಂಡ್ಯ ಸಿಟಿ** |

**ದಿನಾಂಕಃ 09.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನನಗೆ ಈಗ ತೋರಿಸಿದ ಮಹಜರಿನಲ್ಲಿ ಇರುವ ಸಹಿ ನನ್ನದು. ಸದರಿ ಮಹಜರನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.2(ಬಿ)** ಎಂದು ಗುರುತಿಸಲಾಗಿದೆ. ಸದರಿ ಸಹಿಯನ್ನು 6 – 7 ವರ್ಷಗಳ ಹಿಂದೆ ಗಾಂಧಿನಗರ 6ನೇ ಕ್ರಾಸಿನಲ್ಲಿ ಮಾಡಿರುತ್ತೇನೆ. ಪೋಲೀಸರು ಗಲಾಟೆ ವಿಚಾರಕ್ಕೆ ಅಲ್ಲಿಗೆ ಬಂದಿರುತ್ತಾರೆ. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆ ಸಮಯ ನಿಪಿ–3 ರಂತೆ ಪೋಟೋವನ್ನು ತೆಗೆಸಿರುತ್ತಾರೆ. ಪೋಲೀಸರು ನನ್ನ ಮುಂದೆ ಯಾವುದೇ ಮಹಜರ್ ಮೂಲಕ ಯಾವುದಾದರೂ ವಸ್ತು ವಶಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸ್ಥಳವನ್ನು ಪೋಲೀಸರಿಗೆ ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಎಂಒ–1 ರೀಪರ್ ಪಟ್ಟಿ ಸೀಮೆಂಟ್ ಇಟ್ಟಿಗೆ ಚೂರುಗಳು ಮತ್ತು ಸೀಮೆಂಟ್ ಡಸ್ಟುಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಅವುಗಳನ್ನು ಪೋಲೀಸರಿಗೆ ಯಾರು ನೀಡಿರುತ್ತಾರೆ ಎಂದು ನನಗೆ

ಗೊತ್ತಿಲ್ಲ. ನಿಪಿ–3 ಪೋಟೋದಲ್ಲಿ ಇರುವ ಉಳಿದವರು ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ–2 ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2) ದಿಃ30.08.2019 ರಂದು ಪೋಲೀಸರು ಗಾಂದಿನಗರದ 6ನೇ ಕ್ರಾಸಿನಲ್ಲಿರುವ ಚಾಸಾ– 1 ಪುಟ್ಟಮಾದಯ್ಯರವರು ಮನೆ ನಂ.381 ರ ಬಳಿ ನನ್ನನ್ನು ಕರೆಸಿ ಚಾಸಾ–1 ಮತ್ತು ಅವರ ಮನೆಯವರಿಗೂ ಮತ್ತು ಆರೋಪಿತರ ಮದ್ಯೆ ಗಲಾಟೆಯ ವಿಚಾರವನ್ನು ತಿಳಿಸಿ ಮಹಜರ್ ತಯಾರಿಸಲು ಸಹಕರಿಸಬೇಕೆಂದು ಹೇಳಿದ ಮೇರೆಗೆ ನಾನು ಒಪ್ಪಿ ಹಾಜರಿದ್ದು ಆ ಸಮಯ ನನ್ನ ಸಮಕ್ಷಮ ಚಾಸಾ–1 ರವರು ತೋರಿಸಿಕೊಟ್ಟಂತೆ ನಿ.ಪಿ.2 ರಂತೆ ಮಹಜರನ್ನು ಮಾಡಿದ್ದು, ಸದರಿ ಮಹಜರಿನಲ್ಲಿ ನಾನು ಸ್ಥಳದಲ್ಲಿ ಪೊಲೀಸರು ಬರೆದಿದ್ದನ್ನು ಓದಿ ನೋಡಿ ಸಂಜೆ 4.00 ರಿಂದ 4.45 ಗಂಟೆಯ ಮದ್ಯೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯ ಆರೋಪಿತರು ಶೆಡ್ಡುಗಳನ್ನು ಹೊಡೆದಾಕಿದ್ದಾಗ ಅಲ್ಲಿ ಬಿದಿದ್ದ ನ್ಯಾಯಾಲಯದ ಮುಂದಿರುವ ಎಂಒ–1 ರಿಂದ 3 ಇಟ್ಟಿಗೆ ಚೂರುಗಳು, ಎಂಒ–4 ಸೀಮೆಂಟ್ ಡಸ್ಟು ಮತ್ತು ಹಲ್ಲೆಗೆ ಉಪಯೋಗಿಸಿದ ರೀಪರ್ ಪಟ್ಟಿಯನ್ನು ಚಾಸಾ- 1 ರವರು ಪೋಲೀಸರಿಗೆ ತೋರಿಸಿದ ಮೇರೆಗೆ ಪೋಲೀಸರು ಅವುಗಳನ್ನು ಜಪ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ಆ ಸಮಯ ಮಹಜರ್ ಬರೆದಿರುವ ವಿಷಯ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯ ನಿಪಿ–3 ರಿಂದ ರಂತೆ ಪೋಟೋಗಳನ್ನು ಸಹಾ ತೆಗೆಸಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಂಒ–1 ರಿಂದ 4 ವಸ್ತುಗಳನ್ನು ಹಾಗೂ ಚಾಸಾ– 1 ರವರನ್ನು ಆ ದಿನ ಸ್ಥಳದಲ್ಲಿ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ

ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ